ಬೀದಿ ಹಸುಗಳು ಮುತ್ತಿಗೆ ಹಾಕಿ ಮಾವಿನೆಲೆ ಸೊಪ್ಪುಸದೆ ಹೂವುಗಳನ್ನು ಜಗಿಯುತ್ತಿರುವಾಗ ನಮ್ಮ ಕಣ್ಣೆದುರಲ್ಲೇ ಬೆಳೆದ ಹುಡುಗ ಉಪೇಂದ್ರ ಓಡಿ ಬಂದು ಅವುಗಳನ್ನು ಓಡಿಸಿದ. ರಂಗಧಾಮಯ್ಯನವರ ಮನೆಯಲ್ಲೇ ಅದೂ ಇದೂ ಕೆಲಸ ಮಾಡಿಕೊಂಡಿದ್ದ ಅವನು ಹೊತ್ತು ಹುಟ್ಟುವ ಮುಂಚೆಯೇ ಸಿಟಿ ಮಾರ್ಕೆಟ್ಟಿಗೆ ಹೋಗಿ ಎಪ್ಪತ್ತೈದು ಎಂಬತ್ತು ಹೂವಿನ ಹಾರಗಳನ್ನು, ಇಪ್ಪತ್ತು ಇಪ್ಪತ್ತೈದು ತುರಾಯಿಗಳನ್ನು, ಇನ್ನೂರು ನಿಂಬೆಹಣ್ಣುಗಳನ್ನು ಒಂದು ಟೆಂಪೋದಲ್ಲಿ ತುಂಬಿಕೊಂಡು ಬಂದು ಅವುಗಳನ್ನು ಯಾರು ಯಾರಿಗೆ ಹಂಚಬೇಕಿತ್ತೋ ಅವರಿಗೆಲ್ಲ ಹಂಚಿಬಿಟ್ಟಿದ್ದ. ಬೇಹುಗಾರಿಕಾ ಇಲಾಖೆಯಿಂದ ಎಚ್ಚರಿಕೆಯ ಸಂದೇಶ ಬಂದ ಕಾರಣ ಪೊಲೀಸರು ವಿಶೇಷ ಬಂದೋಬಸ್ತು ಮಾಡಿದ್ದರು. ಕಾವಲು ಕರ್ತವ್ಯಕ್ಕಾಗಿ, ಮಾದಕವಸ್ತುಗಳನ್ನೋ ಬಾಂಬುಗಳನ್ನೋ ಪತ್ತೆಹಚ್ಚುವುದಕ್ಕಾಗಿ, ವಿಐಪಿ ಸೆಕ್ಯೂರಿಟಿಗಾಗಿ ನಿಯೋಜನೆಗೊಳ್ಳುತ್ತಿದ್ದ ಜರ್ಮನ್ ಶೆಪರ್ಡ್, ಲ್ಯಾಬ್ರಡಾರ್ ರಿಟ್ರೀವರ್, ಡಾಬರ್ಮನ್ ಪಿನ್‌ಷರ್ ಮೊದಲಾದ ತಳಿಗಳ, ದೀರ್ಘಕಾಲ ತರಬೇತಿ ಪಡೆದ ನೂರಕ್ಕೂ ಹೆಚ್ಚು ನಾಯಿಗಳು ನಮ್ಮ ರಾಜ್ಯದಲ್ಲಿವೆಯೆಂದು ನಮಗೆಲ್ಲ ಗೊತ್ತಿದ್ದದ್ದೇ. ಅವುಗಳಲ್ಲಿ ನಲವತ್ತಕ್ಕೂ ಹೆಚ್ಚು ನಮ್ಮ ನಗರದಲ್ಲೇ ಇದ್ದುವೆನ್ನಿ. ಆ ನಲವತ್ತರಲ್ಲೂ ಟೈಗರ್, ಥಂಡರ್ ಎಂಬ ಎರಡು ನಾಯಿಗಳು ಮೆರವಣಿಗೆಯ ಜೊತೆಜೊತೆಗೇ ಹೆಜ್ಜೆ ಹಾಕಿದ್ದವು. ಅವುಗಳನ್ನು ಕಂಡು ನಮಗೇನೂ ಅಷ್ಟು ಭಯವಾಗಲಿಲ್ಲವೆನ್ನಿ. ಯಾಕೆಂದರೆ, ಅವು ನಿಧಾನವಾಗಿ ತಮ್ಮ ಕೋರೆ ಹಲ್ಲುಗಳ ನಡುವೆ ಹಬೆಯೆಬ್ಬಿಸುವಂತಿದ್ದ ಗುಲಾಬಿ ನಾಲಿಗೆಗಳನ್ನು ಇಳಿಬಿಟ್ಟುಕೊಂಡು ಸಾಗುತ್ತಿರುವಾಗ ಯಾರನ್ನೋ ನೋಡಿ ಗುರುಗುಟ್ಟುವುದಾಗಲೀ ಅಟ್ಟಿಸಿಕೊಂಡು ಹೋಗುವುದಾಗಲೀ ಮಾಡುತ್ತಿರಲಿಲ್ಲ. ಇನ್ನು ಬೀದಿಯಲ್ಲಿ ಮಕ್ಕಳನ್ನೋ ಹೆಂಗಸರನ್ನೋ ಗಮನಿಸುತ್ತಿದ್ದುದೇ ಅಪರೂಪ. ಅವರಲ್ಲಿ ಯಾರಾದರೂ ಎದುರಿಗೇ ಬಂದರೆ ಒಂದು ಬಗೆಯ ಅಚ್ಚರಿಯಿಂದ ನೋಡುತ್ತಿದ್ದವೇ ಹೊರತು ಅಪ್ಪಿತಪ್ಪಿ ಕೂಡ ಬೊಗಳುತ್ತಿರಲಿಲ್ಲ. ಯಾರಾದರೂ ಗಂಡಸರು ಕಣ್ಣಿಗೆ ಬಿದ್ದರೆ ಮಾತ್ರ ಪೊಲೀಸರು ಹಿಡಿದುಕೊಂಡಿದ್ದ ತಮ್ಮ ಸರಪಳಿಯನ್ನು ಜಗ್ಗುತ್ತಾ ಸ್ವಲ್ಪ ದೂರದವರೆಗಾದರೂ ಅವರನ್ನು ಹಿಂಬಾಲಿಸುತ್ತಿದ್ದವು. ಒಂದನ್ನೊಂದು ಬಿಟ್ಟಿರಲಾಗದ ಜೊತೆಯಾಗಿರುವಂತೆ ನಡೆಯುತ್ತಿದ್ದರೂ ಅವು ಒಮ್ಮೊಮ್ಮೆ ತಮ್ಮ ಹಿಂದೇನಾಗುತ್ತಿದೆಯೆಂದು ಗಮನಿಸುವಂತೆ ಎಡಕ್ಕೋ ಬಲಕ್ಕೋ ತಲೆ ತಿರುಗಿಸಿ ನೋಡುತ್ತಿದ್ದವೆಂದು ನಮಗಂತೂ ಗೊತ್ತಾಗುತ್ತಿರಲಿಲ್ಲ.

ಪಾಪದ ನಾಯಿಗಳು. ಅವುಗಳ ರೆಪ್ಪೆ ಮಿಟುಕದ, ಆಳವೂ ಹೊಳಪೂ ಆದ ಹಳದಿ ಕಣ್ಣುಗಳಲ್ಲಿ ಒಂದಿಷ್ಟು ಭಯವಾಗಲೀ ದ್ವೇಷವಾಗಲೀ ಮೊರೆಯಾಗಲೀ ಇದ್ದದ್ದನ್ನು ನಾವೆಂದೂ ಕಂಡದ್ದಿಲ್ಲ. ಲಿಂಗಪ್ಪನೋ ವೆಂಕಟಸ್ವಾಮಿಯೋ ಕತ್ತು ತಿರುಗಿಸಿ ಎತ್ತಲೋ ನೋಡಿದರೆ ಸಾಕು, ತಮ್ಮ ತಮ್ಮ ಮೂತಿಗಳನ್ನು ಮೇಲೆತ್ತಿ, ಕಿವಿಗಳನ್ನು ನಿಮಿರಿಸಿ ಆಲಿಸಿ, ವಿಶೇಷವೇನಿಲ್ಲ, ಎಲ್ಲ ಪರಿಚಿತವಾದದ್ದೇ ಎನ್ನುವಂತೆ ಮೂತಿಗಳನ್ನು ಮತ್ತೆ ಕೆಳಗೆ ಹಾಕಿ ಬೇರೇನಾದರೂ ವಾಸನೆ ಬಂದೀತೇನೋ ಎಂದು ತಮ್ಮ ಹೊಳ್ಳೆಗಳನ್ನು ಅರಳಿಸುತ್ತಿದ್ದವು. ನಾವು ಈ ಮುನ್ನ ಎಷ್ಟೋ ಸಲ ಯಾವುದೇ ಭಯವಿಲ್ಲದೆ ಚಿಟಿಕೆ ಹೊಡೆದು ಅವು ಬಾಲವಲ್ಲಾಡಿಸುವುದನ್ನು ನೋಡಿ ಸಂತೋಷಪಟ್ಟಿದ್ದವು. ಇವತ್ತು ಮೆರವಣಿಗೆಯಲ್ಲಿ ನಮ್ಮ ಜೊತೆಗೇ ಇದ್ದ ಉಪೇಂದ್ರ ನಾಲ್ಕಾರು ಬಾರಿ ಅವುಗಳ ಮೈದಡವಿದ್ದ. ಅವು ಋಣ ತೀರಿಸುವಂತೆ ಅವನ ಕೈ ನೆಕ್ಕಿದ್ದವು.

ರಾಜಕೀಯದಲ್ಲಿ ಕನಸೋ ಭರವಸೆಯೋ ಅಷ್ಟು ಮುಖ್ಯವಲ್ಲ. ಮುಖ್ಯವಾದದ್ದು ದೂರಾಲೋಚನೆ, ಕುಯುಕ್ತಿ. ಕಳೆದ ವರ್ಷ ನಮ್ಮ ನೆರೆಯ ರಾಜ್ಯದಲ್ಲಿ ಚುನಾವಣೆ ನಡೆದಾಗ ಏನೆಲ್ಲ ಹಿಂಸಾಚಾರ ನಡೆದಿತ್ತೆಂದು ಯಾರಿಗೆ ಗೊತ್ತಿಲ್ಲ? ಆದ್ದರಿಂದ ಪೊಲೀಸರು ಮುತುವರ್ಜಿ ವಹಿಸಿ ನಮ್ಮ ಮಂತ್ರಿಗಳ ರಾಜಕೀಯ ವಿರೋಧಿಗಳ ಅನುಯಾಯಿಗಳೆನಿಸಿದ ಅನೇಕ ಮಂದಿ ಸಮಾಜವಿರೋಧಿ ಘಾತುಕರನ್ನು ಸೆರೆಹಿಡಿದಿದ್ದರು. ಅವರಲ್ಲಿ ಪರೋಡಿ ಪೊಮ್ಮನೂ ಒಬ್ಬನೆಂದು ತಿಳಿದು ನಮಗೆಲ್ಲ ತುಂಬಾ ಸಂತೋಷವಾಗಿತ್ತು. ಈ ಪರೋಡಿ ಪೊಮ್ಮ ಕಳೆದ ವಾರವಷ್ಟೆ ನಮ್ಮ ಕೇರಿಯಲ್ಲಿ ಷರ್ಟಿಲ್ಲದೆ ಬರೀ